ಜಪಾನಿನ ವಾಚು, ಬ್ಯಾಟರಿ, ಸ್ಟೀಲ್, ಶಾಯಿ, ಕಾರು ಎಲ್ಲವೂ ವಿಶ್ವಪ್ರಸಿದ್ಧ. ಟೀ ಸೆರಮನಿ ಮತ್ತು ಚೆರ್‍ರಿ ಬ್ಲಾಸಂ ಬಗ್ಗೆ ಎಲ್ಲರಿಗೂ ಗೊತ್ತು. ಹಾಗಿದ್ದೂ ವಿಶ್ವ ಪ್ರವಾಸಿಗರಿಗೆ ಜಪಾನ್ ದೂರವೇ ಇತ್ತು. ಆದರೆ ಈಗ ಜಪಾನ್ ಪ್ರವಾಸಿಗರನ್ನು ಕೈಬೀಸಿ ಕರೆಯುತ್ತಿದೆ. ಭಾರತೀಯರು ದೊಡ್ಡ ಸಂಖ್ಯೆಯಲ್ಲಿ ಪ್ರವಾಸ ಹೋಗುತ್ತಿದ್ದಾರೆ.

★ ಚಿತ್ರ- ಲೇಖನ: **ಗೀತಾ ಕುಂದಾಪುರ**



ಟೊಕಿಯೋ ಟವರ್ ಮತ್ತು ರೈನ್ ಬೊ ಬ್ರಿಜ್



ಕಿಯೋಮಿಜು ಮಂದಿರ

ಜಪಾನ್ ತೆರೆದುಕೊಂಡದ್ದು ಕಡಿಮೆ. ಶತಮಾನಗಳವರೆಗೆ ಕೊರಿಯ ಮತ್ತು ಚೀನಾದೊಂದಿಗೆ ಸಂಬಂಧ ಬೆಳೆಸಿದ್ದು ಬಿಟ್ಟರೆ ಜಗತ್ತಿನ ಎಲ್ಲದರಿಂದ, ಎಲ್ಲರಿಂದ ದೂರವೇ ಉಳಿದಿತ್ತು ಆ ದೇಶ. ಭಾಷೆ, ಧರ್ಮ, ಸಂಸ್ಕೃತಿ ಮತ್ತು ವಾಸ್ತುಶಿಲ್ಪವನ್ನು ಜಪಾನ್, ಚೀನಾದಿಂದಲೇ ಎರವಲು ಪಡೆದದ್ದು. ಆದರೆ ಅವೆಲ್ಲವನ್ನೂ ತನ್ನದಾಗಿಸಿಕೊಂಡು ಅದರಲ್ಲೇ ಹೊಸತನವನ್ನು ರೂಢಿಸಿದ್ದು ಜಪಾನಿನ ವಿಶೇಷ.

19ನೆಯ ಶತಮಾನಕ್ಕೆ ಕಾಲಿಡುತ್ತಿದ್ದಂತೆ ಜಪಾನ್ ಪಾಶ್ಚಿಮಾತ್ಯ ದೇಶಗಳಿಗೆ ತೆರೆದುಕೊಂಡದ್ದು ಮಾತ್ರವೇ ಅಲ್ಲ, ಪ್ರಥಮ ವಿಶ್ವಯುದ್ಧ ಮತ್ತು ಹಲವು ಯುದ್ಧಗಳಲ್ಲಿ ಗೆದ್ದು ತನ್ನ ಸಾಮ್ರಾಜ್ಯವನ್ನೂ ವಿಸ್ತಾರಗೊಳಿಸಿತು. ಚೀನಾ ಮತ್ತು –ಜಪಾನ್ ನಡುವಣ ಯುದ್ಧವಂತೂ ಆಗ ದಿನನಿತ್ಯದ ರಗಳೆಯಾಗಿತ್ತು, 1937ರಲ್ಲಿ ಶುರುವಾದ ಚೀನಾ– ಜಪಾನ್ ಯುದ್ಧ ಎರಡನೆಯ ವಿಶ್ವ ಯುದ್ಧದವರೆಗೂ ಮುಂದುವರೆಯಿತು.

ತಡೆಯುವವರಿಲ್ಲದ ಜಪಾನನ್ನು ಮಣಿಸಲು ಅಮೆರಿಕಾ ಮತ್ತು ಬ್ರಿಟನ್ ದೇಶಗಳ ಒಕ್ಕೂಟವು 1945ರಲ್ಲಿ ಹಿರೋಶಿಮಾ ಮತ್ತು ನಾಗಸಾಕಿಯ ಮೇಲೆ ಅಣು ಬಾಂಬು ಎಸೆಯಿತು. ಲಕ್ಷಾಂತರ ಜನರು ನೋಡ ನೋಡುತ್ತಲೇ ಸುಟ್ಟು ಕರಕಲಾದರು. ಅಲ್ಲಿಗೇ ಜಪಾನಿನ ಕಥೆ ಮುಗಿಯಿತು ಎಂದೇ ಜಗತ್ತು ಭಾವಿಸಿತ್ತು. ಆದರೆ ಕ್ರಮೇಣ ಮತ್ತೆ ಎದ್ದು ಕೂತ ಜಪಾನ್ ವಿಶ್ವದ ಆರ್ಥಿಕತೆಯಲ್ಲಿ ಎರಡನೆಯ ಸ್ಥಾನ ಪಡೆಯಿತು. ಪ್ರತಿಯೊಂದರಲ್ಲೂ ಜಪಾನ್ ಜತೆಗೆ ಪೈಪೋಟಿಗೆ ಇಳಿಯುವ ಚೀನಾ, ಇತ್ತೀಚಿನ ವರ್ಷಗಳಲ್ಲಿ ಜಪಾನನ್ನು ಹಿಂದಿಕ್ಕಿ ಆರ್ಥಿಕ ಅಭಿವೃದ್ಧಿಯಲ್ಲಿ ವಿಶ್ವದಲ್ಲಿ ಎರಡನೇ ಸ್ಥಾನಕ್ಕೇರಿದೆ.

ಜಪಾನಿನ ಜನರು ಕಷ್ಟಸಹಿಷ್ಣುಗಳು. ಅವರಷ್ಟು ಶಿಸ್ತಿನಿಂದ ಶ್ರಮಸಂಸ್ಕೃತಿಯನ್ನು ರೂಢಿಸಿಕೊಂಡ ಬೇರೆ ದೇಶಗಳನ್ನು ಹುಡುಕುವುದು ಕಷ್ಟ. ಭೌಗೋಳಿಕವಾಗಿ ಪ್ರತಿಕೂಲ ವಾತಾವರಣ ಇದ್ದರೂ, ಪದೇ ಪದೇ ಪ್ರಕೃತಿಯ